<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.68/2017</u>

ದಿಃ 08.10.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-18 Pw-9

| | | |
|---|---|---|
| ಹೆಸರು | ಃ | ನಾಜ್ ನೀನ್ ತಾಜ್ |
| ಗಂಡನ ಹೆಸರು | ಃ | ಸೈಯ್ಯದ್ ನಸ್ರುಲ್ಲಾ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಅಗಲಕೋಟೆ,<br>ಮಾಗಡಿ ಟೌನ್ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಚಾಸಾ.1, 16 ಮತ್ತು 19ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತು. ಮೃತ ಬಿಬಿ ಆಯೇಷಾ ಚಾಸಾ.1ರವರ ಮಗಳು. ದಿಃ01.03.2017ರಂದು ನಾವು ಚಾಸಾ.16ರವರ ಮನೆಯ ಬಳಿ ಇದ್ದಾಗ ಚಾಸಾ.1 ಅಲ್ಲಿಗೆ ಬಂದು ಬಿಬಿ ಆಯೇಷಾ ಬಂದಿದ್ದಾಳಾ ಎಂದು ಕೇಳಿದರು. ಆಕೆಯನ್ನು ನಾವು ಎಲ್ಲರೂ ಸೇರಿ ಎಲ್ಲಾ ಕಡೆ ಹುಡಕಿದರೂ ಸಿಗಲಿಲ್ಲ. ನಂತರ ಮಾರನೇ ದಿನ ದಿಃ02.03.2017ರಂದು ಬೆಳಿಗ್ಗೆ 10 ಗಂಟೆಗೆ ನಾನು, ಚಾಸಾ.1, 16 ಮತ್ತು ಅಕ್ಕಪಕ್ಕದ ಮನೆಯ ಇತರೆಯವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆವು. ಸುಮಾರು ಬೆಳಿಗ್ಗೆ

11.30/12.00 ಗಂಟೆ ಸಮಯದಲ್ಲಿ ದೂರು ನೀಡುತ್ತಿದ್ದಾಗ ಚಾಸಾ.16 ರವರಿಗೆ ಪದೇ ಪದೇ ಕರೆ ಮಾಡಿ ಮಾತನಾಡಬೇಕು ಮನೆ ಬಳಿ ಬಾ ಎಂದು ಕರೆದರು. ಮೃತ ಬಿಬಿ ಆಯೇಷಾಳ ಶಾಲೆಯ ಬಳಿ ಹೋಗಿ ಸ್ನೇಹಿತರ ಮನೆಗೆ ಹೋದ ಬಗ್ಗೆ ವಿಚಾರಿಸಿದೆವು. ಆನಂತರ 1 ನೇ ಆರೋಪಿಯ ಮನೆಗೆ ಹೋಗಿದ್ದೆವು. ಆಗ ಸುಮಾರು 12.00/12.30 ಸಮಯ ಆಗಿತ್ತು. ನಾನು, ಚಾಸಾ.16 ಮತ್ತು ಇನ್ನೊಬ್ಬರು ಇದ್ದೆವು. 1 ನೇ ಆರೋಪಿಯ ಮನೆಯಲ್ಲಿ ಆತ ಮತ್ತು 2 ರಿಂದ 4 ನೇ ಆರೋಪಿಗಳು ಇದ್ದರು. ಆಗ ಮಾತನಾಡುತ್ತಾ 2 ನೇ ಆರೋಪಿ ಆಯೇಷಾಳನ್ನು ಯಾರೋ 4 ಜನ ಕರೆದುಕೊಂಡು ಹೋಗಿರುತ್ತಾರೆ, ಮಾಟ-ಮಂತ್ರ ಮಾಡಿಸಿ ಮಗು ಬರುತ್ತದೆ ಎಂದು ಹೇಳಿದರು. ನಂತರ ನಾವು 4 ನೇ ಆರೋಪಿಗೆ ಪಾರ್ಶ್ವ ವಾಯುವಾಗಿರುವುದಕ್ಕೆ ಎಲ್ಲಾದರೂ ತೋರಿಸುವಂತೆ ಹೇಳಿದೆವು, ಅದಕ್ಕೆ ಆರೋಪಿಗಳು ಅದಕ್ಕೂ ಮಾಡಿದ್ದೇವೆ ಎಂದು ಹೇಳಿದರು. 2 ನೇ ಆರೋಪಿ ಮೃತ ಆಯೇಷಾಳ ಬಟ್ಟೆಯನ್ನು ನಮ್ಮ ಬಳಿ ಪಡೆದಿದ್ದು, ಯಾವುದೋ ವಸ್ತುಗಳನ್ನು ಹಾಕಿ ಚಾಸಾ.1 ರವರ ಮನೆಯ ಸಜ್ಜೆಯ ಮೇಲೆ ಇಡಲು ಕೊಟ್ಟಿದ್ದರು. ನಾವು ಆಗ ಅದನ್ನು ತೆಗೆದು ನೋಡಿರಲಿಲ್ಲ. ನಂತರ ಪೊಲೀಸರು ಬಂದು ಅವರೇ ಅದನ್ನು ತೆಗೆದಿದ್ದು

ನಿಂಬೆಹಣ್ಣು ಮತ್ತು ಬೀಗ ಇದ್ದವು. 3 ದಿನಗಳಾದ ಮೇಲೆ 3.30 ರಿಂದ 4.00 ಗಂಟೆ ಸಮಯದಲ್ಲಿ ಯಾರೋ ಒಂದು ಮಗುವನ್ನು ಹೊಡೆದು ಹಾಕಿದ್ದಾರೆಂದು ತಿಳಿಯಿತು. ಕೂಡಲೇ ನಾವು ಹೊಸಹಳ್ಳಿ ಪಕ್ಕದಲ್ಲಿರುವ ರಸ್ತೆಯ ಪಕ್ಕದಲ್ಲಿ 1 ನೇ ಆರೋಪಿಯವರ ಜಮೀನಿನಲ್ಲಿ ಹಳ್ಳದ ಬಳಿ ಒಂದು ಶೆಡ್ ಇದ್ದು, ಒಂದು ಮೃತದೇಹ ತೆಗೆದಿದ್ದು ಮುಖದ ಮೇಲೆಲ್ಲಾ ಗುರುತು ಮಾಡಿದ್ದು, ಕೂದಲಿಗೆ ಕಟ್ಟುವ ಟೇಪ್‌ನಿಂದ ಜೀರಿದ್ದು, ದೇಹದ ಮೇಲೆಲ್ಲಾ ಬರೆಗಳು ಮತ್ತು ಚುಚ್ಚಿದ ಗುರುತುಗಳು ಇತ್ತು, ಮುಖದ ಮೇಲೆಲ್ಲಾ ಕೊಯ್ದಿದ್ದರು. ಪಾರ್ಶ್ವ ವಾಯು ಸರಿಪಡಿಸುವ ಉದ್ದೇಶಕ್ಕಾಗಿ ಆರೋಪಿಗಳು ಬಲಿ ಕೊಟ್ಟಿರುತ್ತಾರೆಂದು ತಿಳಿಯಿತು.

ಪಾಟೀ ಸವಾಲುಃ ಶ್ರೀ. ಎಂ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ ಕಲಂ 231(2)ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.